**(ಇಂದು ದಿನಾಂಕ 12-03-2025 ರಂದು ಮಧ್ಯಂತರ ಅರ್ಜಿ ನಂಃ 12 ಮತ್ತು 13 ರ ಆದೇಶದನ್ವಯ ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು)**

**ಪಾಟೀಸವಾಲುಃ ಪ್ರತಿವಾದಿ ನಂಃ 3 ರವರ ಪರ ಶ್ರೀ ಎಸ್ ಸಿ ಕೆ ವಕೀಲರಿಂದ**

ದಾವಾ ಅನುಸೂಚಿ ಕ್ರಮ ಸಂಖ್ಯೆ 1 ಮತ್ತು 2 ರ ಸ್ವತ್ತಿನ ಉತಾರಿನಲ್ಲಿ ಒಟ್ಟು 8 ಜನರ ಹೆಸರು ದಾಖಲಿದೆ . ಆ 8 ಜನರು ಸದರಿ ಸ್ವತ್ತುಗಳ ಮಾಲೀಕರು ಎಂದರೆ ಸರಿ . ದಾವಾ ಅನುಸೂಚಿ ಕ್ರಮ ಸಂಖ್ಯೆ 3 ರಿಂದ 6 ರ ಸ್ವತ್ತಿನ ಉತಾರಿನಲ್ಲಿ ಒಟ್ಟು 8 ಜನರ ಹೆಸರು ದಾಖಲಿದೆ . ಆ 8 ಜನರ ಹೆಸರು ಹೇಳಬಹುದಾ ಎಂದು ಕೇಳಿದರೆ ಸಾಕ್ಷಿಯು ಸಾಧುನವರರವರು ಖರೀದಿ ಮಾಡಿದ್ದಾರೆ ಈ ಕುರಿತು ಪ್ರಕರಣ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಬಾಕಿ ಇದೆ ಎಂದು ಹೇಳುತ್ತಾರೆ. ಆ 8 ಜನರು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸರಿಯಲ್ಲ . ಸದರಿ 8 ಜನರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ ಅವರು ಸಹ ದಾವಾ ಸ್ವತ್ತುಗಳಲ್ಲಿ ಹಿಸ್ಸೆ ಹೊಂದಿದ್ದಾರೆ ಎಂದರೆ ಸಾಕ್ಷಿಯು ಅವರು ಬೇರೆ ಆಸ್ತಿಗಳಲ್ಲಿ ಹಿಸ್ಸೆ ಹೊಂದಿದ್ದಾರೆ ಎಂದು ಹೇಳುತ್ತಾರೆ .

ಶ್ರೀಮತಿ ಕಮಲವ್ವಾ ಸಿದ್ದಪ್ಪ ಬಾಳಗಿ ಇವರು ಮೃತ್ಯು ಪತ್ರ ಬರೆದುಕೊಟ್ಟಿರುವ ಆಧಾರದಲ್ಲಿ ನಾನು ಹಕ್ಕನ್ನು ಕೊರುತ್ತಿದ್ದೇನೆ . ದಾವಾ ಸ್ವತ್ತುಗಳಲ್ಲಿ ಶ್ರೀಮತಿ ಕಮಲವ್ವಾ ಸಿದ್ದಪ್ಪ ಬಾಳಗಿ ಇವರು 1/8 ಹಿಸ್ಸೆ ಹೊಂದಿದ್ದಾರೆ . ನಾನು ದಾವಾ ಪತ್ರದಲ್ಲಿ ಶ್ರೀಮತಿ ಕಮಲವ್ವಾ ಸಿದ್ದಪ್ಪ ಬಾಳಗಿ ಇವರ 1/8 ಹಿಸ್ಸೆಕ್ಕೆ ನಾನು ಮಾಲೀಕನೆಂದು ಘೋಷಣೆ ಮಾಡಬೇಕೆಂದು ನಾನು ಕೊರಿಲ್ಲ

ಅಥವಾ ದಾವೆ ಹಾಕಿಲ್ಲ ಎಂದರೆ ಸರಿಯಲ್ಲ .

ಶ್ರೀಮತಿ ಕಮಲವ್ವಾ ಸಿದ್ದಪ್ಪ ಬಾಳಗಿ ಇವರು 2020 ರಲ್ಲಿ ಮರಣ ಹೊಂದಿದ್ದಾರೆ . ದಾವಾ ಸ್ವತ್ತುಗಳು ಶ್ರೀಮತಿ ಕಮಲವ್ವಾ ಸಿದ್ದಪ್ಪ ಬಾಳಗಿ ಇವರಿಗೆ ಅವರ ತಂದೆಯಿಂದ ಬಂದ ಸ್ವತ್ತುಗಳು ಆಗಿವೆ . ಶ್ರೀಮತಿ ಕಮಲವ್ವಾ ಸಿದ್ದಪ್ಪ ಬಾಳಗಿ ಇವರ ತಂದೆಯ ಹೆಸರು ಗಣಪತರಾವ್ ದೇಸಾಯಿ @ ರಾವ್ ಸಾಹೇಬ ಇರುತ್ತದೆ . ಗಣಪತರಾವ್ ದೇಸಾಯಿ ಇವರಿಗೆ ನಾನಾಸಾಹೇಬ , ಬಾಬುಸಾಹೇಬ , ಅಪ್ಪಾರಸಾಹೇಬ ಮತ್ತು ಬಾಪುಸಾಹೇಬ ಎನ್ನುವ 4 ಜನ ಗಂಡು ಸಂತಾನ ಹಾಗೂ ಕಮಲವ್ವ , ಶಾಂತವ್ವ , ಕಲ್ಲವ್ವ ಮತ್ತು ರತ್ನ ಎನ್ನುವ 4 ಜನ ಹೆಣ್ಣು ಸಂತಾನ ಎಂದರೆ ಸರಿ . ಕಮಲವ್ವಾ ಇವರ ಗಂಡನ ಹೆಸರು ಸಿದ್ದಪ್ಪ ಬಾಳಗಿ . ಕಮಲವ್ವಾ ಇವರಿಗೆ ಇಬ್ಬರು ಗಂಡು ಮಕ್ಕಳು ಮತ್ತು ಇಬ್ಬರು ಹೆಣ್ಣು ಮಕ್ಕಳು ಎಂದರೆ ಸರಿ . ಕಮಲವ್ವಾ ಇವರ ಮಗ ಪ್ರಕಾಶ ಇವರನ್ನು ಅಥವಾ ಅವರ ಹೆಂಡತಿ ಮಕ್ಕಳನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸಾಕ್ಷಿಯ ಅವರು ಬೇರೆ ಊರಿನಲ್ಲಿ ಇರುತ್ತಾರೆ ಎಂದು ಹೇಳುತ್ತಾರೆ . ನನ್ನ ದಾವಾ ಪತ್ರದಲ್ಲಿ ಕಮಲವ್ವಾ ಇವರ 1/8 ಹಿಸ್ಸೆಯ ದಾವಾ ಸ್ವತ್ತುಗಳ ಚೆಕ್ ಬಂದಿ ಕಾಣಿಸಿಲ್ಲ ಎಂದರೆ ಸರಿ . ಸಾಕ್ಷಿಯು ಅವು ಇನ್ನೂ ಹಿಸ್ಸೆಯಾಗಿಲ್ಲ ಎಂದು ಹೇಳುತ್ತಾರೆ . ವಾಟಣಿ ಕೊರಿ ಸಲ್ಲಿಸಿರುವ ದಾವೆಯಲ್ಲಿ ಎಲ್ಲಾ ಹಿಸ್ಸೆದಾರರನ್ನು ಸೇರಿಸದೇ ಇದ್ದಲ್ಲಿ ದಾವೆ ಊರ್ಜಿತವಾಗುವುದಿಲ್ಲ ಎಂದರೆ ಸರಿಯಲ್ಲ .

ಕಮಲವ್ವಾ ಇವರು ನಿಮ್ಮ ಹೆಸರಿಗೆ ಯಾವಾಗ ಮೃತ್ಯು ಪತ್ರ ಬರೆದರು ಎಂದು ಕೇಳಿದರೆ ಸಾಕ್ಷಿಯು ಪತ್ರ ಬರೆದಿರುವುದು ನನಗೆ ಗೊತ್ತಿಲ್ಲ ಅವರ ಮರಣದ ನಂತರ ನನಗೆ

ಗೊತ್ತಾಯಿತು ಎಂದು ಹೇಳುತ್ತಾರೆ . ಕಮಲವ್ವಾ ಇವರು ಮರಣ ಹೊಂದು ಒಂದು ತಿಂಗಳ ನಂತರ ಮೃತ್ಯು ಪತ್ರ ಬರೆದಿರುವ ಬಗ್ಗೆ ಗೊತ್ತಾಯಿತು . ಮೃತ್ಯು ಪತ್ರ ಬರೆದಿರುವ ವಿಷಯವನ್ನು ನನ್ನ ಗೆಳೆಯ ಪ್ರಕಾಶ ಮುತಗಿ ಎನ್ನುವವರು ಹೇಳಿದರು. ಮೃತ್ಯು ಪತ್ರ ಬರೆದಿರುವ ವಿಷಯ ಪ್ರಕಾಶ ಮುತಗಿ ಇವರಿಗೆ ಹೇಗೆ ಗೊತ್ತು ಎಂದು ಕೇಳಿದರೆ ಸಾಕ್ಷಿಯು ಮೃತ್ಯು ಪತ್ರ ಬರೆಯುವ ಕಾಲಕ್ಕೆ ಅವರನ್ನು ಕರೆದುಕೊಂಡು ಹೋಗಿದ್ದರು ಅದರಿಂದ ಅವರಿಗೆ ಗೊತ್ತು ಎಂದು ಹೇಳುತ್ತಾರೆ . ದಾವಾ ಸ್ವತ್ತುಗಳು ಕಮಲವ್ವಾ ಇವರ ಜಂಟಿ ಕಬ್ಜೆಯಲ್ಲಿತ್ತು ಎಂದರೆ ಸರಿ . ಕಮಲವ್ವಾ ಇವರು ತನಗೆ ವಯಸ್ಸಾದ ಕಾರಣ ದಾವಾ ಜಮೀನುಗಳನ್ನು ನೋಡಿಕೊಳ್ಳಲು ಆಗದ ಹಿನ್ನಲೆಯಲ್ಲಿ ತನ್ನ ಮಗ 3 ನೇ ಪ್ರತಿವಾದಿ ಹೆಸರಿಗೆ ಒಂದು ಸಾಮಾನ್ಯ ಅಧಿಕಾರ ಪತ್ರ ಕೊಟ್ಟಿದ್ದರು ಎಂದರೆ ಸರಿ . ಸಾಕ್ಷಿಯು ನಂತರ ಅದನ್ನು ರದ್ದುಪಡಿಸಲಾಗಿದೆ ಎಂದು ಹೇಳುತ್ತಾರೆ . ಜಿಪಿಎ ರದ್ದುಪಡಿಸಿರುವ ದಾಖಲೆಯನ್ನು ಈ ದಾವೆಯಲ್ಲಿ ಹಾಜರುಪಡಿಸಿದ್ದೇನೆ . ನಾನು ಹೇಳಿದಂತಹ ಜಿಪಿಎ ರದ್ದುಪಡಿಸಿರುವ ದಾಖಲೆ ನಾನು ಹಾಜರುಪಡಿಸುವ ದಾಖಲೆಗಳಲ್ಲಿ ಇಲ್ಲ ಎಂದರೆ ಸರಿ . ಸಾಕ್ಷಿಯು ನಂತರ ಹಾಜರುಪಡಿಸುವುದಾಗಿ ಹೇಳುತ್ತಾರೆ .

ಕಮಲವ್ವಾ ಇವರು ತನ್ನ ಮಕ್ಕಳ ಜೊತೆ ಸಾಯುವವರೆಗೆ ಅರಾಮ ಇದ್ದಳು ಎಂದರೆ ಸರಿಯಲ್ಲ . ಸಾಕ್ಷಿಯು ಕಮಲವ್ವಾ ರವರ ಜೊತೆ ಮಗ ಇರಲಿಲ್ಲ ಎಂದು ಹೇಳುತ್ತಾರೆ . ಕಮಲವ್ವಾ ಇವರ ಜೊತೆ ಮಗ ಕಳೆದ 15 ವರ್ಷಗಳಿಂದ ಇರಲಿಲ್ಲ . ನಿಪಿ-1 ನ್ನು ಬರೆಯುವ ಕಾಲಕ್ಕೆ ಕಮಲವ್ವಾ ಇವರ ದೈಹಿಕ ಮತ್ತು ಮಾನಸಿಕ ಸ್ಥಿತಿ ಸರಿ ಇರಲಿಲ್ಲ ಎಂದರೆ ಸರಿಯಲ್ಲ . ನಿಪಿ-1 ರಲ್ಲಿ ಕಮಲವ್ವಾ ಇವರು ತನ್ನ ಎಷ್ಟು ಹಿಸ್ಸೆ ಎಂಬುವುದನ್ನು ಕಾಣಿಸಿಲ್ಲ ಎಂದರೆ ಸರಿ . ಪ್ರಕಾಶ ಮುತಗಿ ಇವರು ನಿಪಿ-1 ನ್ನು ಬರೆದ

ದಿನಾಂಕ ಮತ್ತು ಸಮಯ ಹೇಳಲಿಲ್ಲ . ಅದೇ ರೀತಿ ನಿಪಿ-1 ನ್ನು ಬರೆದ ವ್ಯಕ್ತಿಯ ಹೆಸರು ಹಾಗೂ ಸಾಕ್ಷಿದಾರರ ಹೆಸರು ನನಗೆ ಹೇಳಲಿಲ್ಲ . ನಿಪಿ-1 ನ್ನು ಸೃಷ್ಟಿಮಾಡಿಕೊಂಡಿದ್ದೇವೆ ಎಂದರೆ ಸರಿಯಲ್ಲ . ನಿಪಿ-1 ನ್ನು ಸೃಷ್ಟಿ ಮಾಡುವ ಕಾಲಕ್ಕೆ ನಾನು ಸಹ ಹಾಜರಿದ್ದು ಈಗ ಸದರಿ ವಿಷಯವನ್ನು ಪ್ರಕಾಶ ಮುತಗಿ ಹೇಳಿದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ .

ಕಮಲವ್ವಾ ಇವರ ಮರಣದ ನಂತರ ದಾಸನಕೊಪ್ಪ ಗ್ರಾಮದ ಸರ್ವೆ ನಂ፣ 10 ಮತ್ತು 11 ನ್ನು ನನ್ನ ಹೆಸರಿಗೆ ಖಾತೆ ಮಾಡಿಸಿಕೊಂಡಿದ್ದೇನೆ . ಖಾತೆ ಮಾಡಿಸುವ ಕಾಲಕ್ಕೆ ಪ್ರತಿವಾದಿಯವರಿಗೆ ಮಾಹಿತಿ ಕೊಟ್ಟಿಲ್ಲ ಎಂದರೆ ಸಾಕ್ಷಿಯು ತಹಶಿಲ್ದಾರ ನ್ಯಾಯಾಲಯದಿಂದ ಆದೇಶ ಆಗಿದೆ ಎಂದು ಹೇಳುತ್ತಾರೆ . ಸದರಿ ಆದೇಶದ ಪ್ರತಿಯನ್ನು ಈ ದಾವೆಯಲ್ಲಿ ಹಾಜರುಪಡಿಸಿಲ್ಲ . ನಾನು ಪ್ರತಿವಾದಿಯರ ಗಮನಕ್ಕೆ ಬಾರದಂತೆ ದಾಸನಕೊಪ್ಪ ಗ್ರಾಮದ 2 ಜಮೀನುಗಳನ್ನು ನನ್ನ ಹೆಸರಿಗೆ ಖಾತೆ ಮಾಡಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ .

ಕಮಲವ್ವಾ ಇವರ ಮರಣದ ನಂತರ ಜಿಲ್ಲಾ ನ್ಯಾಯಾಲಯದಿಂದ ಪ್ರೊಬೇಟ್ ಪಡೆದಿಲ್ಲ ಎಂದರೆ ಸಾಕ್ಷಿಯು ಪಡೆದಿಲ್ಲ ಅದಕ್ಕೆ ಈ ದಾವೆಯನ್ನು ಹಾಕಿದ್ದೇನೆ ಎಂದು ಹೇಳುತ್ತಾರೆ . ಪ್ರೊಬೇಟ್ ಪಡೆಯಲು ಅರ್ಜಿ ದಾಖಲಿಸಿದ್ದಲ್ಲಿ ಎಲ್ಲಾ ಹಕ್ಕುದಾರರಿಗೂ ನೋಟಿಸ ಹೋಗುತ್ತದೆ ಮತ್ತು ಪತ್ರಿಕಾ ಜಾಹಿರಾತು ತೆಗೆದುಕೊಳ್ಳಬೇಕಾಗುತ್ತದೆ ಎನ್ನುವ ಕಾರಣಕ್ಕಾಗಿ ದಾವೆಯನ್ನು ಈ ನ್ಯಾಯಾಲಯದಲ್ಲಿ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ .

ದಾವಾ ಸ್ವತ್ತುಗಳಲ್ಲಿ ನನ್ನ ತಾಯಿ ಶಾಂತಾ ಇವರಿಗೆ ತನ್ನ ಕಾನೂನು ಬದ್ದ ಹಿಸ್ಸೆ ಇದೆ ಎಂದರೆ ಸರಿ . ನನ್ನ ತಾಯಿಯ ಕಾನೂನು ಬದ್ದ ಹಿಸ್ಸೆ ಇದ್ದರೂ ಸಹ ದಾವಾ ಸ್ವತ್ತುಗಳನ್ನು ಕಬಳಿಸಲು ನಿಪಿ-1 ನ್ನು ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ . ನಿಪಿ-1 ನ್ನು ಬರೆಯುವ ಕಾಲಕ್ಕೆ ಕಮಲವ್ವಾ ಇವರಿಗೆ ವಯಸ್ಸಾಗಿದ್ದು ಅವರಿಗೆ ಸರಿಯಾಗಿ ಕಣ್ಣು ಕಾಣಿಸುತ್ತಿರಲಿಲ್ಲ ಮತ್ತು ಕಿವಿಯೂ ಕೇಳಿಸುತ್ತಿರಲಿಲ್ಲ ಎಂದರೆ ಸರಿಯಲ್ಲ .

3 ನೇ ಪ್ರತಿವಾದಿ ಕೆ ಎಸ್ ಆರ್ ಟಿ ಸಿ ಯಲ್ಲಿ ಚಾಲಕನಾಗಿ ಕೆಲಸ ಮಾಡುತ್ತಾನೆ ಎಂದರೆ ಸರಿ . 3 ನೇ ಪ್ರತಿವಾದಿ ತನ್ನ ಕರ್ತವ್ಯದ ಮೇಲೆ ಸಾಮಾನ್ಯವಾಗಿ ಬೇರೆ ಬೇರೆ ಊರಿಗೆ ಹೋಗುತ್ತಾನೆ ಎನ್ನುವ ಕುರಿತು ನನಗೆ ಮಾಹಿತಿ ಇಲ್ಲ . ಕಮಲವ್ವಾ ಇವರ ಹೆಣ್ಣು ಮಕ್ಕಳು ಮದುವೆಯ ನಂತರ ಅವರ ಗಂಡನ ಮನೆಯಲ್ಲಿ ಇರುತ್ತಾರೆ ಎಂದರೆ ಸಾಕ್ಷಿಯು ಅವರು ಧಾರವಾಡದಲ್ಲಿ ಇರುತ್ತಾರೆ , ಒಬ್ಬರದು ಮದುವೆಯಾಗಿಲ್ಲ ಎಂದು ಹೇಳುತ್ತಾರೆ .

ಕಮಲವ್ವಾ ಅಥವಾ ಅವರ ಹೆಣ್ಣು ಮಕ್ಕಳು ಕಾಯ್ದೆ ಯ ಮಾಹಿತಿ ಇರುವುದಿಲ್ಲ ಮತ್ತು ಕಾಗದಗಳ ಕುರಿತು ಮಾಹಿತಿ ಹೊಂದಿರುವುದಿಲ್ಲ ಎಂದರೆ ಸರಿಯಲ್ಲ . ಕಮಲವ್ವಾ ಇವರ ಮಗ ಪ್ರಕಾಶ ಮರಣ ಹೊಂದಿದ್ದು ಅವನ ವಾರಸುದಾರರು ಬೇರೆ ಕಡೆ ವಾಸವಿದ್ದಾರೆ ಎಂದರೆ ಸರಿ . ಈ ಎಲ್ಲಾ ಹಿನ್ನಲೆಗಳಲ್ಲಿ ಮತ್ತು ಕಾರಣಕ್ಕಾಗಿ ನಿಪಿ-1 ನ್ನು ಸೃಷ್ಟಿಮಾಡಿಕೊಂಡಿದ್ದೇನೆ ಎಂದರೆ ಸರಿಯಲ್ಲ . ನಿಪಿ-1 ರನ್ವಯ ನನಗೆ ಯಾವುದೇ ರೀತಿಯ ಕಾಯ್ದೆ ಬದ್ದ ಹಕ್ಕು ಪ್ರಾಪ್ತವಾಗುವುದಿಲ್ಲ ಎಂದರೆ ಸರಿಯಲ್ಲ . ಪ್ರತಿವಾದಿಯರು ವಾರಸಾ ಪ್ರಕಾರ ದಾವಾ ಸ್ವತ್ತುಗಳ ಪ್ರತ್ಯೇಕ ಕಬ್ಜಾ ಹೊಂದಿದ್ದು

ಇರುತ್ತದೆ ಎಂದರೆ ಸರಿಯಲ್ಲ. ನಾನು ದಾವಾ ಸ್ವತ್ತುಗಳ ಕಬ್ಜಾ ವಹಿವಾಟು ಹೊಂದದೇ ಇರುವ ಕಾರಣ ಸರಿಯಾಗಿ ನ್ಯಾಯಾಲಯದ ಶುಲ್ಕವನ್ನು ಭರಿಸದೇ ಸುಳ್ಳು ದಾವೆ ಸಲ್ಲಿಸಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ .

**ಮರುವಿಚಾರಣೆ ಃ ಇಲ್ಲ .**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಅದೆ ,

ಪ್ರ ಹಿ ದಿ ನ್ಯಾ ಹಾಗೂ ಸಿಜೆಎಂ, ಧಾರವಾಡ.